**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿ.ಸಿ.ನಂ. 38/2026**

**ಫಿರ್ಯಾದುದಾರರು ಃ ಕ್ಯಾತನಹಳ್ಳಿ ಪೊಲೀಸರು**

**ವಿರುದ್ಧ**

**ಆರೋಪಿ ಃ 1. ಸತ್ಯನಾರಾಯಣ ಕೆ ಬಿನ್ ಲೇಟ್ ಕಮಲೇಶ್ ಎನ್, 58 ವರ್ಷ, ಕೆಎ–50/ಎಂಬಿ–4411 ರ ಕಾರಿನ ಚಾಲಕ, ವಾಸಃ ನಂಃ 1063/100, 2 ನೇ ಮೈನ್, 2 ನೇ ಹಂತ, ವಿದ್ಯಾರಣ್ಯಪುರಂ, ಮೈಸೂರು ಸಿಟಿ**

**ಆಪಾದನಾ ಸಾರಾಂಶ**

*ದಿನಾಂಕ 07.12.2025 ರಂದು ಮದ್ಯಾಹ್ನ 12.15 ಗಂಟೆ ಸಮಯದಲ್ಲಿ ಕ್ಯಾತನಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿಯ ಕಟ್ಟೇರಿ – ಬನ್ನಂಗಾಡಿ ಮುಖ್ಯ ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ–50/ಎಂಬಿ–4411 ವೋಕ್ಸ್ ವ್ಯಾಗನ್ ವೆಂಟೋ ಕಾರನ್ನು ಬನ್ನಂಗಾಡಿ ಕಡೆಯಿಂದ ಕಟ್ಟೇರಿ ಗ್ರಾಮದ ಕಡೆಗಾದಂತೆ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ 2 ನೇ ಆರೋಪಿರವರು ಸಾಕ್ಷಿ.8 ರವರು ಬಾಬ್ತು ಕೆಎ–11/ಇಜೆಡ್–2140 ರ ಬಜಾಜ್ ಪಲ್ಸರ್ ಎನ್ ಎಸ್ 200 ಬೈಕಿನಲ್ಲಿ ಕಟ್ಟೇರಿ ಕಡೆಯಿಂದ ಬನ್ನಂಗಾಡಿ ಕಡೆಗಾದಂತೆ ರಸ್ತೆಯ ಎಡಭಾಗದಲ್ಲಿ ಚಾಲನೆ ಮಾಡಿಕೊಂಡು ಬರುತ್ತಿರುವಾಗ 1 ನೇ ಆರೋಪಿಯಾದ ನೀವು ನಿಮ್ಮ ಕಾರನ್ನು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರುಾಕತೆಯಿಂದ ಬಲಭಾಗಕ್ಕಾದಂತೆ ಓಡಿಸಿಕೊಂಡು ಹೋಗಿ 2 ನೇ ಆರೋಪಿರವರು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿ* ***ಭಾರತೀಯ ನ್ಯಾಯ ಸಂಹಿತೆ ಕಲಂ 281 ರಡಿಯಲ್ಲಿ*** *ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.*

ಅದೇ ದಿನ  ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ತಿಳಿಸಿದ ರೀತಿಯಲ್ಲಿ ಕಾರನ್ನು ಚಲಾಯಿಸಿದ ಡಿಕ್ಕಿ ಮಾಡಿದ ಪರಿಣಾಮ 2 ನೇ ಆರೋಪಿರವರು ಬೈಕಿನಿಂದ ಕೆಳಕ್ಕೆ ಬಿದ್ದು ಅವರ ಬಲಗಾಲಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ **ಭಾರತೀಯ ನ್ಯಾಯ ಸಂಹಿತೆ ಕಲಂ 125(ಎ) ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸಾಕ್ಷಿ.2 ರವರು ಬೈಕ್ ಸಮೇತ ಕೆಳಕ್ಕೆ ಬಿದ್ದು ಸಾಕ್ಷಿ.2 ರವರಅದೇ ದಿನ  ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ತಿಳಿಸಿದ ರೀತಿಯಲ್ಲಿ ಕಾರನ್ನು ಚಲಾಯಿಸಿದ ಡಿಕ್ಕಿ ಮಾಡಿದ ಪರಿಣಾಮ 2 ನೇ ಆರೋಪಿರವರು ಬೈಕಿನಿಂದ ಕೆಳಕ್ಕೆ ಬಿದ್ದು ಅವರ ಬಲಗೈಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ **ಭಾರತೀಯ ನ್ಯಾಯ ಸಂಹಿತೆ ಕಲಂ 125(ಬಿ) ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಪ್ರ 1 ಮೇಲೆ ಹೇಳಿದ ಆಪಾದನೆಯ ಸಾರಾಂಶ ನಿಮಗೆ ಅರ್ಥವಾಯಿತೆ?**

**ಉಃ**

**ಪ್ರ 2 ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷೆ ಇದೆಯೆ ?**

**ಉಃ**

**(ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ ಹೇಳಿ, ಅವರು ಸರಿಯೆಂದು ಒಪ್ಪಿದ ಮೇರೆಗೆ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.)**

ದಿಃ 22.05.2026 (ಆರ್. ಮಹೇಶ)

ಸ್ಥಳಃ ಪಾಂಡವಪುರ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.